ಕರ್ನಾಟಕ ಸರ್ಕಾರ

ಸಂಖ್ಯೆ: ಸಕಇ 59 ಬಿಸಿಎ 97

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 3-9-97

## ಸುತ್ತೋಲೆ

ವಿಷಯ: ರಾಜ್ಯ ಸರ್ಕಾರಿ ಸೇವೆಯ ವಿವಿಧ ವರ್ಗದ ಹುದ್ದೆಗಳಿಗೆ ಅಭ್ಯರ್ಥಿಗಳಿಂದ ಸಲ್ಲಿಸಲ್ಪಡುವ ಮೀಸಲಾತಿ ಪ್ರಮಾಣ ಪತ್ರಗಳನ್ನು ತಹಶೀಲ್ದಾರರವರ ಬದಲಿಗೆ ಇತರೆ ಪ್ರಾಧಿಕಾರಿಗಳು ನೀಡಲಾಗುತ್ತಿರುವುದನ್ನು ತಡೆಹಿಡಿಯುವ ಬಗ್ಗೆ.

---

ರಾಜ್ಯ ಸರ್ಕಾರಿ ಸೇವೆಯ ವಿವಿಧ ವರ್ಗದ ಹುದ್ದೆಗಳ ನೇಮಕಾತಿಗಾಗಿ ಹಾಗೂ ಮೀಸಲಾತಿ ಸೌಲಭ್ಯ ಪಡೆಯುವ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗಾಗಿ ಜಾತಿ ಪ್ರಮಾಣ ಪತ್ರವನ್ನು ನೀಡಲು ಕೇವಲ ತಹಶೀಲ್ದಾರ್ ಮತ್ತು ಅವರಿಗೆ ಮೇಲ್ಪಟ್ಟಂತಹ ಕಂದಾಯ ಅಧಿಕಾರಿಗಳಿಗೆ ಮಾತ್ರ ಅಧಿಕಾರವಿರುವುದಾಗಿ ಸೂಚಿಸಲಾಗಿದೆ ಹಾಗೂ ಈ ಸೌಲಭ್ಯಗಳನ್ನು ಪಡೆಯುವ ಸಲುವಾಗಿ ಅಭ್ಯರ್ಥಿಗಳು ನಿಗದಿತ ನಮೂನೆಗಳನ್ನು ಸಂಬಂಧಪಟ್ಟವರಿಗೆ ಸಲ್ಲಿಸಲು ಅರ್ಜಿಯ ನಮೂನೆಯನ್ನು ನಿಗದಿಪಡಿಸಿ ಸರ್ಕಾರಿ ಆದೇಶ ಸಂಖ್ಯೆ ಸಕಇ 40 ಬಿಸಿಎ 95, ದಿನಾಂಕ: 6-2-95ರಲ್ಲಿ ಹೊರಡಿಸಿದೆ.

ಸುತ್ತೋಲೆ ದಿನಾಂಕ: 4-7-94ರಲ್ಲಿ ನಿರ್ದಿಷ್ಟ ಸೂಚನೆಗಳಿದ್ದಾಗ್ಯೂ ಹಲವು ಅಭ್ಯರ್ಥಿಗಳಿಗೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಉಪ ತಹಶೀಲ್ದಾರ್, ಪೌರಾಯುಕ್ತರು ನಗರ ಸಭೆ ಹಾಗೂ ಇತರೆ ಅನ್ಯ ಪ್ರಾಧಿಕಾರಿಗಳು ನೀಡುತ್ತಿದ್ದು ಅನ್ಯ ಪ್ರಾಧಿಕಾರಿಗಳು ಅಂತಹ ಅಭ್ಯರ್ಥಿಗಳ ಮೀಸಲಾತಿ ಪ್ರಮಾಣ ಪತ್ರಗಳನ್ನು ತಿರಸ್ಕರಿಸಿ ಅಭ್ಯರ್ಥಿಗಳನ್ನು ಸಾಮಾನ್ಯ ಅರ್ಹತೆಯಡಿಯಲ್ಲಿ ಪರಿಗಣಿಸಲಾಗುತ್ತಿದ್ದು ಇದನ್ನು ಅಭ್ಯರ್ಥಿಗಳು ಕರ್ನಾಟಕ ಆಡಳಿತ ನ್ಯಾಯ ಮಂಡಳಿ ಮತ್ತು ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸುತ್ತಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆ. ಹಾಗೂ ಇಂತಹ ಅಭ್ಯರ್ಥಿಗಳು ಮೀಸಲಾತಿ ಸೌಲಭ್ಯದಿಂದ ವಂಚಿತರಾಗುತ್ತಿರುವುದನ್ನು ಮನಗಂಡು, ಇನ್ನು ಮುಂದೆ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಸಂಬಂಧಿಸಿದ ತಹಶೀಲ್ದಾರ್ ಹಾಗೂ ಅವರಿಗೆ ಮೇಲ್ಪಟ್ಟಂತಹ ಕಂದಾಯ ಅಧಿಕಾರಿಗಳೇ ಮಾತ್ರ ನೀಡತಕ್ಕದ್ದು. ಈ ಅಧಿಕಾರಿಗಳಿಗಿಂತ ಕೆಳದರ್ಜೆಯ ಕಂದಾಯ ಅಧಿಕಾರಿಗಳು ಅಥವ ಇತರೆ ಅಧಿಕಾರಿಗಳು ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ನೀಡಬಾರದೆಂದು; ಹಾಗೇನಾದರೂ ನೀಡಿದಲ್ಲಿ ಅಂತಹ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಜರುಗಿಸಲಾಗುವುದೆಂದು ಸೂಚಿಸಲಾಗಿದೆ.

(ಪಿ. ಪುಷ್ಪ ರಾಣಿ) 3/9
ಸರ್ಕಾರದ ಅಧೀನ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ.

1) ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು
2) ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಬೆಂಗಳೂರು
3) ಎಲ್ಲಾ ವಿಭಾಗಾಧಿಕಾರಿಗಳಿಗೆ
4) ಎಲ್ಲಾ ಜಿಲ್ಲಾಧಿಕಾರಿಗಳಿಗೆ
5) ನಿರ್ದೇಶಕರು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಬೆಂಗಳೂರು
6) ಎಲ್ಲಾ ತಹಶೀಲ್ದಾರರುಗಳಿಗೆ
7) ಎಲ್ಲಾ ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಧಿಕಾರಿಗಳಿಗೆ
8) ಎಲ್ಲಾ ಇಲಾಖಾ ಕಾರ್ಯದರ್ಶಿಗಳಿಗೆ
9) ಪತ್ರಿಕಾ ಪ್ರಕಟಣಾ ಶಾಖೆ
10) ಶಾಸನ ರಾಜ್ಯ ಪತ್ರ
11) ಶಾಖಾ ರಕ್ಷಾ ಕಡತ
12) ಬಿಡಿ ಪ್ರತಿಗಳು.